ಸಂಬಂಧಿಸಿದ್ದೆಲ್ಲವೂ ಸಂಭಾಷಣೆಗೆ ತರಲು ವರ್ಜ್ಯವಾಗಿರುವಾಗ, 2,500 ವರ್ಷಗಳ ಹಿಂದೆಯೇ ಮುಟ್ಟಿನ ಬಟ್ಟೆಗಳನ್ನು ನಿರ್ವಹಿಸುವುದರ ಬಗ್ಗೆ ನಡೆದ ಮುಕ್ತ ಸಂವಾದ ಅಚ್ಚರಿ ಹುಟ್ಟಿಸುತ್ತದೆ.

## ಬೌದ್ಧ ಚಿಂತನೆಗಳಲ್ಲಿ ಜೆಂಡರ್ ಫ್ಲುಯಿಡಿಟಿ

ಪಾಶ್ಚಾತ್ಯ ಯೋಚನೆಗಳ ಪ್ರಭಾವಕ್ಕೆ ಒಳಪಡುವ ಮೊದಲು ಭಾರತೀಯ ಚಿಂತನ ಕ್ರಮಕ್ಕೆ ಭಾಷ್ಯ ಬರೆಯುವಲ್ಲಿ ಬೌದ್ಧ ಧರ್ಮದ ಪಾಲೂ ಇದೆ. ಪುರುಷತ್ವ ಮತ್ತು ಸ್ತ್ರೀತ್ವ ಎನ್ನುವುದು ಬದಲಾಗದಿರುವ ಗುಣಗಳು ಎನ್ನುವ ಕಲ್ಪನೆಯೇ ತಾರತಮ್ಯದಿಂದ ಕೂಡಿದ್ದು ಎಂದು ಪ್ರತಿಪಾದಿಸಿದ ಮಹಾಯಾನ ಸಿದ್ಧಾಂತವನ್ನು ಎತ್ತಿ ಹಿಡಿಯುತ್ತದೆ. “ಹೆಣ್ಣುರೂಪವೆನ್ನುವುದಾಗಲಿ, ಅದರ ಸ್ವಾಭಾವಿಕ ಗುಣಗಳು ಅಂತಾಗಲಿ ಇಲ್ಲ” ಎಂದು ಬುದ್ಧನ ಶಿಷ್ಯ ಸಾರಿಪುತ್ರ ಸಾರುತ್ತಾನೆ. ಇಂದು ನಾವು ಮಾತನಾಡುತ್ತಿರುವ ಲಿಂಗಸೂಕ್ಷ್ಮತೆ ಮತ್ತು ಲಿಂಗ ಸಂವೇದಿ ಗುಣಗಳ ಬೀಜರೂಪ ಬುದ್ಧನ ಕಾಲದಲ್ಲೇ ನಿಷ್ಕರ್ಷಕ್ಕೆ ಒಳಪಟ್ಟಿತ್ತು ಎಂದು ತಿಳಿಯುತ್ತದೆ.

## ಸಂಘಗಳಲ್ಲಿ ಲಿಂಗ ಸಮಾನತೆಯ ಅಂಶ

ಬುದ್ಧನ ಚಿಂತನೆಯೇ ಜೀವಪರವಾಗಿ ಮಹಿಳೆಯರನ್ನೂ ಸೇರಿದಂತೆ ಎಲ್ಲರನ್ನೂ ಒಳಗೊಂಡಿತ್ತು. ಬುದ್ಧ ಎಲ್ಲ ಧಾರ್ಮಿಕ ಗುರುಗಳಂತೆ ಹೆಣ್ಣಿಗೆ ಕರ್ತವ್ಯಗಳನ್ನು ಬೋಧಿಸಿದರೂ, ಅದೇ ಸಮಯದಲ್ಲಿ ಸಮಾನ ಎಂಬಂತಹ ನಿಯಮ-ಕರ್ತವ್ಯಗಳನ್ನು ಗಂಡಿಗೂ ಬೋಧಿಸುತ್ತಾನೆ. ಲೈಂಗಿಕತೆ ಮಹಿಳೆ ಮತ್ತು ಪುರುಷರಿಬ್ಬರಲ್ಲೂ ಸಮಾನವಾಗಿ ಕಾಣುವ ಅಂಶ ಎನ್ನುವುದೂ ಅವನಿಗೆ ಗೊತ್ತಿತ್ತು. ಕುತಂತ್ರ, ಒಳಸಂಚು ಮುಂತಾದ ಹೆಣ್ಣಿಗೆ ಮಾತ್ರ ಹೊರಿಸಲಾದ ಸಣ್ಣತನಗಳು ಎಲ್ಲ ಮಾನವರಲ್ಲೂ ಅಡಕವಾಗಿರುವ ಮನುಷ್ಯಸಹಜ ಗುಣಗಳು. ಜ್ಞಾನೋದಯ ಮತ್ತು ನಿರ್ವಾಣ ಸಾಧ್ಯವಾಗುವುದೇ ಮನುಷ್ಯ ಪರಿವರ್ತನೆಯಾಗಲು ಪ್ರಯತ್ನಿಸುವ ಪ್ರಕ್ರಿಯೆಯಲ್ಲಿ. ಆ ಹಾದಿಯಲ್ಲಿ ನಡೆಯುವ ಗಂಡು- ಹೆಣ್ಣುಗಳೆಲ್ಲರಿಂದಲೂ ಸಮಾನವಾಗಿ ಆ ಪ್ರಯತ್ನ ನಡೆಯಬೇಕು ಎಂದು ಬುದ್ಧ ಬೋಧಿಸುತ್ತಿದ್ದ ಎನ್ನಲಾಗಿದೆ. ಚರಿತ್ರೆಯಲ್ಲಿ ಸ್ತ್ರೀಕಥನಕ್ಕೆ ಜಾಗವೇ ಇರದಿದ್ದ ಸಮಯದಲ್ಲೂ, ಥೇರಿಯರ ಹೆಸರುಗಳನ್ನೂ, ಅವರ ಬದುಕಿನ ಕಥೆಗಳನ್ನೂ ದಾಖಲಿಸಿರುವುದು ಥೇರೀಗಾಥಾದ ವೈಶಿಷ್ಟ್ಯ.

***

ಕಾಲದ ಚಲನೆ ಸರಳರೇಖೆಯಂತಿರದೇ ಒಂದು ಚಕ್ರದ ರೂಪದಲ್ಲಿದೆ ಎಂಬುದು ಈ ಪುಸ್ತಕ ಓದುವಾಗ ಅನಿಸುವುದು. ಚರಿತ್ರೆಯ ಒಂದೊಂದೇ ಪುಟ ಮಡಚಿದಂತೆ ನಾವು ಒಂದೊಂದೇ ಸಮಸ್ಯೆಯನ್ನು ಪರಿಹರಿಸಿಕೊಳ್ಳುತ್ತಾ ಮುಂದೆ ನಡೆಯುತ್ತಿರುತ್ತೇವೆ ಎಂದು ಭ್ರಮೆ ಪಡುತ್ತೇವೆ. ಆದರೆ, ಮನುಷ್ಯಲೋಕದ ಶೂಲೆಗಳು ತಮ್ಮ ಮೂಲಸ್ವರೂಪವನ್ನು ಬದಲಿಸಿಕೊಳ್ಳದೇ ಹೊಸ ಹೊಸ ಅಂಗಿ ತೊಟ್ಟು ಪ್ರಕಟಗೊಳ್ಳುತ್ತವೆ ಎಂಬುದಂತೂ ವಿದಿತ.

ಬೌದ್ಧ ಸಂಘಗಳಲ್ಲೂ ಸ್ತ್ರೀಯರನ್ನು ಎರಡನೆಯ ದರ್ಜೆಯಲ್ಲಿಟ್ಟೇ ನೋಡಲಾಗುತ್ತಿತ್ತು. ಅತ್ಯಂತ ಹಿರಿಯ ಭಿಕ್ಕುಣಿ ಕೂಡ ಒಬ್ಬ ಕಿರಿಯ ಭಿಕ್ಕು ಬಂದಾಗ ಎದ್ದು ನಿಂತು ಗೌರವ ತೋರಿಸಬೇಕು ಎಂಬ ನಿಯಮವನ್ನು ಭಿಕ್ಕುಣಿ ಸಂಘದ ಸೃಷ್ಟಿಕರ್ತೆ ಮಹಾಪ್ರಜಾಪತಿ ಗೌತಮಿ ಪ್ರಶ್ನಿಸುತ್ತಾಳೆ. ಬುದ್ಧನೂ ಸೇರಿದಂತೆ ಹಲವರು ಬೌದ್ಧ ಧಾರ್ಮಿಕ ಗ್ರಂಥಗಳಲ್ಲಿ ಹೆಂಗಸರನ್ನು ಮುಕ್ತಿಸಾಧನೆಗೆ ಬಹುದೊಡ್ಡ ಅಡ್ಡಿ ಎಂದು ಭಾವಿಸಿರುವುದು ಕಂಡು ಬರುತ್ತದೆ. ಬುದ್ಧ ತನ್ನ ಪ್ರಿಯ ಶಿಷ್ಯ ಆನಂದನಿಗೆ ಒಂದು ಕಡೆ, “ಹೆಂಗಸರು ಭಿಕ್ಕುಣಿ ದೀಕ್ಷೆ ಪಡೆದು ಸಂಘಕ್ಕೆ ಪ್ರವೇಶಿಸದಿದ್ದಲ್ಲಿ ಈ ಧಮ್ಮ ಒಂದು ಸಾವಿರ ವರ್ಷ ಇರುತ್ತಿತ್ತು. ಆದರೆ ಈಗ ಈ ಧರ್ಮ ಕೇವಲ ಐದುನೂರು ವರ್ಷಗಳು ಮಾತ್ರ ಉಳಿಯುತ್ತದೆ” ಎನ್ನುತ್ತಾನೆ. ಆದರೆ, ಸ್ವತಃ ಬುದ್ಧನ ಮಾತನ್ನೂ ಮೀರಿ ಈ ಎರಡೂವರೆ ಸಾವಿರ ವರ್ಷಗಳ ಗಡಿಯನ್ನೂ ದಾಟಿರುವುದು ಗಮನಿಸಿದರೆ ಬೌದ್ಧಧರ್ಮದಲ್ಲಿ ಹೆಂಗಸರನ್ನೂ ಒಳಗೊಂಡಿದ್ದರ ಮಹತ್ವದ ಅರಿವಾಗುತ್ತದೆ. ಅಂತರಂಗದ ದೀಪವನ್ನು ಹೊತ್ತಿಸಬಲ್ಲ, ಚಿಂತನೆಗೆ ಹಚ್ಚುವ, ಥೇರೀಯರ ಬದುಕಿನ ಗಾಥೆ ಕಾಲದ ದಂದುಗವನ್ನು ಅರ್ಥ ಮಾಡಿಕೊಳ್ಳಲು, ಮುಖ್ಯ ಆಕರ ಒದಗಿಸುತ್ತದೆ. ●